## 2.2- Management of Human Resources – Functions of Head Master – Teacher, Manager and Supervisor.

**ಮಾನವ ಸಂಪನ್ಮೂಲಗಳ ನಿರ್ವಹಣೆ (Management of Human Resources) :**

ದೇಶವು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಹೊಂದಿರಬೇಕಾಗುತ್ತದೆ. ಮಾನವ ಸಂಪನ್ಮೂಲದ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ. ಅದೇ ರೀತಿಯಲ್ಲಿ ಶಾಲೆಯ ಶಿಕ್ಷಣದ ಗುಣಮಟ್ಟವು ಆ ಶಾಲೆಯ ಹೊಂದಿರುವ ಮಾನವ ಸಂಪನ್ಮೂಲಗಳ ಗುಣಮಟ್ಟ ಹಾಗೂ ಅವುಗಳ ಪರಿಣಾಮಕಾರಿ ನಿರ್ವಹಣೆಯನ್ನು ಅವಲಂಬಿಸಿರುತ್ತದೆ. ಶಾಲೆ ತನ್ನ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸುವಲ್ಲಿ ಮಾನವ ಸಂಪನ್ಮೂಲಗಳ ನಿರ್ವಹಣೆ ತನ್ನದೆಯಾದ ಪ್ರಭಾವ ಬೀರುತ್ತದೆ. ಶಿಕ್ಷಣದ ಗುಣಮಟ್ಟ ಕಾಪಾಡಿಕೊಂಡು ಬರಬೇಕಾದರೆ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಮಾನವ ಸಂಪನ್ಮೂಲಗಳನ್ನು ಹೊಂದುವುದರ ಜೊತೆಗೆ ಅವುಗಳನ್ನು ದಕ್ಷ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗುತ್ತದೆ. ಶಿಕ್ಷಣ ಪ್ರಕ್ರಿಯೆಯಲ್ಲಿ ಮಾನವ ಸಂಪನ್ಮೂಲಗಳ ನಿರ್ವಹಣೆ ವಿಶೇಷವಾದ ಪ್ರಾಧಾನ್ಯತೆ ಪಡೆದುಕೊಂಡಿದೆ.

- **ಸಾಮಾನ್ಯ ಗುಣಗಳು (General Qualities)** : ಮುಖ್ಯೋಪಾಧ್ಯಾಯನು ಹೊಂದಿರಬೇಕಾದ ಗುಣಗಳನ್ನು ಪಟ್ಟಿ ಮಾಡುವುದು ಕಷ್ಟಸಾಧ್ಯ. ಆತನು ಮೇಲೆ ವಿವರಿಸಿದ ವಿಶೇಷ ಗುಣಗಳನ್ನು ಹೊಂದುವುದರ ಜೊತೆಗೆ ತನ್ನ ಕರ್ತವ್ಯ ಹಾಗೂ ಸ್ಥಾನಕೆ ಊಕಗತ ನ್ಯಾಯ ಒದಗಿಸಬೇಕಾದರೆ ಈ ಕೆಳಗಿನ ಸಾಮಾನ್ಯ ಗಣಗಳನ್ನು ಸಹ ಹೊಂದಿರಬೇಕಾಗುತ್ತದೆ.
- ಶಾಲಾ ಹಾಗೂ ವೈಯಕ್ತಿಕ ಜೀವನದಲ್ಲಿ ಆಶಾವಾದಿಯಾಗಿರಬೇಕು.
- ಸ್ಫೂರ್ತಿಯ ಚಿಲುಮೆಯಂತಿರಬೇಕು.
- ಹಾಸ್ಯ ಪ್ರವೃತ್ತಿಯುಳ್ಳವಾಗಿರಬೇಕು.
- ಉತ್ಸಾಹಿಯಾಗಿರಬೇಕು.

- **ಪ್ರಜಾಸತ್ತಾತ್ಮಕ ಮನೋವೃತ್ತಿ** (**Democratic Attitude**) : ಶಾಲೆಯು ಒಂದು ಸಾಮಾಜಿಕ ಸಂಸ್ಥೆಯಾಗಿದ್ದು ಅಲ್ಲಿರುವ ಪ್ರತಿಯೊಬ್ಬರು ಸಹ ತಮ್ಮದೆಯಾದ ಸ್ಥಾನವನ್ನು ಹೊಂದಿರುತ್ತಾರೆ. ಶಾಲೆಯ ಮುಖ್ಯಸ್ಥನು ಪ್ರಜಾಸತ್ತಾತ್ಮಕ ಮನೋವೃತ್ತಿಯನ್ನುಳ್ಳವರಾಗಿ ಪ್ರತಿಯೊಬ್ಬರ ಭಾವನೆ, ಅಭಿಪ್ರಾಯ ಹಾಗೂ ವಿಚಾರಗಳಿಗೆ ಮನ್ನಣೆ ನೀಡಬೇಕು. ಮುಖ್ಯೋಪಾಧ್ಯಾಯರು ನಿರಂಕುಶ ತತ್ವದ ಅಡಿಯಲ್ಲಿ ಆಡಳಿತ ನಡೆಸದೆ ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸಬೇಕಾಗುತ್ತದೆ.
- **ವೈಜ್ಞಾನಿಕ ಮನೋವೃತ್ತಿ** (**Scientific Attitude**) : ಒಬ್ಬ ಆದರ್ಶವಾದಿ ಹಾಗೂ ವಾಸ್ತವವಾದಿ ಮುಖ್ಯೋಪಾಧ್ಯಾಯ ಶಾಲೆಯ ಪ್ರತಿಯೊಂದು ವಿಚಾರಗಳಿಗೆ ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳುವಾಗ ವೈಜ್ಞಾನಿಕ ಮನೋವೃತ್ತಿಯನ್ನು ಬಳಸಿಕೊಳ್ಳುವನು. ವೈಜ್ಞಾನಿಕ ಮನೋವೃತ್ತಿಯುಳ್ಳ ಶಾಲೆಯ ಮುಖ್ಯಸ್ಥ ಯಾವುದೇ ಪೂರ್ವಗ್ರಹಪೀಡಿತನಾಗಿರದೆ ಪ್ರತಿಯೊಂದನ್ನು ವಾಸ್ತವಿಕ ತಳಹದಿಯ ಮೇಲೆ ವೀಕ್ಷಿಸಿ ಆಡಳಿತ ನಡೆಸುತ್ತಾನೆ.

- **ಸಹಕಾರ ಮನೋವೃತ್ತಿ** (**Cooperative Attitude**) : ಶಾಲೆ ಮಾನವ ಸಂಪನ್ಮೂಲ ಕೇಂದ್ರಿತ ಒಂದು ಸಹಕಾರಾತ್ಮಕ ಉದ್ಯಮವಾಗಿದೆ. ಮುಖ್ಯೋಪಾಧ್ಯಾಯನು ಶಾಲೆಯನ್ನು ಯಶಸ್ವಯತ್ತ ಮುಂದುವರೆಸಿಕೊಂಡು ಹೋಗಬೇಕಾದರೆ ಅವನು ಸಹಕಾರ ಮನೋವೃತ್ತಿಯನ್ನು ಹೊಂದಿರಬೇಕು. ಮುಖ್ಯೋಪಾಧ್ಯಾಯ ಹಾಗೂ ಸಿಬ್ಬಂದಿ ವರ್ಗದವರಲ್ಲಿ ಪರಸ್ಪರ ನಂಬಿಕೆ ಮತ್ತು ಸಹಕಾರವಿದ್ದಾಗ ಶಾಲೆಯ ಪ್ರತಿಯೊಂದು ಕಾರ್ಯಗಳನ್ನು ಯಶಸ್ವಿಯಾಗಿ ಸಂಘಟಿಸಲು ಸಾಧ್ಯವಾಗುತ್ತದೆ. ಈ ದಿಶೆಯಿಂದ ಶಾಲೆಯ ಮುಖ್ಯಸ್ಥನು ಸ್ವತಃ ಸಹಕಾರ ಪ್ರವೃತ್ತಿ ಹೊಂದುವುದರ ಮೂಲಕ ಬೇರೆಯವರ ಸಹಕಾರವನ್ನು ಪಡೆಯಲು ಪ್ರಯತ್ನಿಸಬೇಕಾಗುತ್ತದೆ.

- **ಸಂವಹನ ಕೌಶಲ (Communicatin Skill)** : ಶಾಲೆಯ ಮುಖ್ಯಸ್ಥನು ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರೊಂದಿಗೆ ಹಾಗೂ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಂವಹನ ಮಾಡಬೇಕಾಗುತ್ತದೆ. ಆದುದರಿಂದ ಮುಖ್ಯೋಪಾಧ್ಯಾ ಉತ್ತಮ ಹಾಗೂ ಮಧುರವಾದ ಧ್ವನಿ ಹೊಂದುವುದರ ಮೂಲಕ ಪರಿಣಾಮಕಾರಿ ಸಂವಹನಕಾರನಾಗಿರಬೇಕು. ಬೇರೆಯವರ ಅಭಿಪ್ರಾಯ, ಅನಿಸಿಕೆ ಹಾಗೂ ವಿಚಾರಗಳನ್ನು ತಾಳ್ಮೆಯಿಂದ ಆಲಿಸಿ, ಸ್ವೀಕರಿಸುವ ಪ್ರವೃತ್ತಿಯನ್ನು ಆತ ಹೊಂದಿರಬೇಕಾಗುತ್ತದೆ. ಮುಖ್ಯೋಪಾಧ್ಯಾಯನು ಉತ್ತಮ ಸಂವಹನ ಕೌಶಲ ಹೊಂದುವುದರ ಮೂಲಕ ಸಾಮೂಹಿಕ ಚರ್ಚೆ ಸರಿಯಾದ ಪಥದಲ್ಲಿ ಚಲಿಸುವಂತೆ ಗಮನಹರಿಸುತ್ತಾನೆ.
- **ಪ್ರಾಮಾಣಿಕ ಕೆಲಸಗಾರ (Conscientious Worker)** : ಶಾಲೆಯ ಪ್ರಮುಖ ರೂವಾರಿಯಾದ ಮುಖ್ಯೋಪಾಧ್ಯಾಯ ಪ್ರಾಮಾಣಿಕ ಹಾಗೂ ಪ್ರಜ್ಞಾಪೂರ್ವಕ ಕೆಲಸಗಾರನಾಗಿರಬೇಕು. ಆತನು ತನ್ನ ಜವಾಬ್ದಾರಿಗಳನ್ನು ದಕ್ಷ ಹಾಗೂ ನಿಷ್ಠೆಯಿಂದ ನಿರ್ವಹಿಸಬೇಕು. ಶಾಲೆಯ ಮುಖ್ಯಸ್ಥನಾದವನು ಶಾಲೆಯ ಪ್ರತಿಯೊಂದು ಸನ್ನಿವೇಶದಲ್ಲಿ ಸಕ್ರೀಯವಾಗಿ ಭಾಗವಹಿಸುವುದರ ಮೂಲಕ ಶಾಲೆಯ ಕೀರ್ತಿಯನ್ನು ನಿರಂತರವಾಗಿ ಪ್ರಗತಿಪಥದತ್ತ ಸಾಗಿಸುವತ್ತ ಪ್ರಾಮಾಣಿಕವಾಗಿ ಪರಿಯತ್ನಿಸುವ ಗುಣವನ್ನು ಹೊಂದಿರಬೇಕು.

- **ಆತ್ಮವಿಶ್ವಾಸವುಳ್ಳ ವ್ಯಕ್ತಿ (A Man of Self-Confidence)** : ಮುಖ್ಯೋಪಾಧ್ಯಾಯ ಶಾಲೆಯ ಪ್ರತಿಯೊಂದು ಕಾರ್ಯಗಳನ್ನು ನಿರ್ವಹಿಸುವಾಗ ಆತ್ಮವಿಶ್ವಾಸವನ್ನು ಹೊಂದಿರಬೇಕು. ಯಾವುದೇ ಕಾರ್ಯವನ್ನು ಆತ್ಮವಿಶ್ವಾಸದಿಂದ ಪ್ರಾರಂಭಿಸಿದರೆ ಅರ್ಧದಷ್ಟು ಕೆಲಸ ಯಶಸ್ವಿಯಾದಂತೆಯೇ ಸರಿ. ಈ ಪ್ರಕಾರದ ಆತ್ಮವಿಶ್ವಾಸವು ಮುಖ್ಯೋಪಾಧ್ಯಾಯನಲ್ಲಿ ಐಕ್ಯತೆಯನ್ನು ಉಂಟುಮಾಡುತ್ತದೆ. ಆತ್ಮವಿಶ್ವಾಸವುಳ್ಳ ವ್ಯಕ್ತಿ ಹಲವಾರು ಸನ್ನಿವೇಶದಲ್ಲಿ ವಿವಿಧ ಸಮಸ್ಯೆಗಳನ್ನು ಯಾವುದೇ ಹೆದರಿಕೆಯಿಲ್ಲದೆ ಜಯಿಸಲು ಸಾಧ್ಯವಾಗುತ್ತದೆ. ಆತ್ಮವಿಶ್ವಾಸವುಳ್ಳ ಮುಖ್ಯೋಪಾಧ್ಯಾಯ ಸಹಶಿಕ್ಷಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ತುಂಬುವಲ್ಲಿ ಸಫಲನಾಗುತ್ತಾನೆ.

- **ತತ್ವಜ್ಞಾನಿ (Philosopher)** : ಮುಖ್ಯೋಪಾಧ್ಯಾಯ ಜೀವನ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸದೃಢವಾದ ತತ್ವಜ್ಞಾನವನ್ನು ಹೊಂದುವುದರ ಮೂಲಕ ತನ್ನ ವೃತ್ತಿಯಲ್ಲಿ ಅವುಗಳನ್ನು ಪಾಲಿಸುತ್ತಾನೆ. ಶಾಲೆಯ ಪ್ರತಿಯೊಂದು ಪ್ರಗತಿ ಹಾಗೂ ಸಾಧನೆಯನ್ನು ತತ್ಜ್ಞಾನದ ಆಧಾರದ ಮೇಲೆ ಅಳೆದು ನಿರಂತರವಾಗಿ ಮೌಲ್ಯಮಾಪನದ ಮೂಲಕ ಶೈಕ್ಷಣಿಕ ಗುರಿಗಳನ್ನು ಸಂಪೂರ್ಣವಾಗಿ ಸಾಧಿಸುವಲ್ಲಿ ಸಫಲತೆಯನ್ನು ಕಾಣಬೇಕು. ಡಾ.ಜಸ್ವಂತ್ ಸಿಂಗ್ "ಉತ್ತಮ ಮುಖ್ಯೋಪಾರ್ಧಯಾಯ ಜಾಗರೂಕತೆಯಿಂದ ಆಧುನಿಕ ವಿಚಾರಗಳ ಮತ್ತು ಸಂಶೋಧನೆಗಳ ಆಧಾರಿತ ಸದೃಢ ತತ್ವಜ್ಞಾನವನ್ನು ಹೊಂದಿರಬೇಕು." ಎಂದು ಅಭಿಪ್ರಾಯ ಪಟ್ಟಿರುವುದು ಸೂಕ್ತವೆನಿಸುತ್ತದೆ.

- **ಉತ್ತಮ ವ್ಯಕ್ತಿತ್ವ (Good Personality)** : ಶಾಲೆಯ ಮುಖ್ಯಸ್ಥನಾದವನು ತನ್ನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವಂತಹ ಆದರ್ಶ ವ್ಯಕ್ತಿತ್ವವನ್ನು ಹೊಂದಿರಬೇಕು. ಸುಸಂಸ್ಕೃತ ನಡೆ, ನುಡಿಯಿಂದ ತನ್ನ ಹುದ್ದೆಯನ್ನು ಸಂತೃಪ್ತಿಯಿಂದ ನಿರ್ವಹಿಸಿಕೊಂಡು ಹೋಗುವ ವ್ಯಕ್ತಿತ್ವ ಅವರದಾಗಿರಬೇಕು. ಶಾಲೆಯ ಪ್ರತಿಯೊಂದು ಚಟುವಟಿಕೆಗಳನ್ನು ಆಯೋಜಿಸುವಾಗ ಬೇರೆಯವರಿಗೆ ಮಾದರಿಯಾಗಿರುವಂತಹ ವ್ಯಕ್ತಿತ್ವವನ್ನು ಮುಖ್ಯೋಪಾಧ್ಯಾಯನು ಹೊಂದಿರಬೇಕಾಗುತ್ತದೆ.
- **ನಿರ್ಣಯ ಕೈಗೊಳ್ಳುವ ಸಾಮರ್ಥ್ಯ (Decision Making Ability)** : ಮುಖ್ಯೋಪಾಧ್ಯಾಯ ಶೈಕ್ಷಣಿಕ ಅಥವಾ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಶೀಘ್ರವಾಗಿ ನಿರ್ಣಯ ಕೈಗೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕಾಗುತ್ತದೆ. ತನ್ನಲ್ಲಿರುವ ಬುದ್ಧಿಶಕ್ತಿ ಹಾಗೂ ಜಾಣ್ಮೆಯಿಂದ ಶಾಲೆಯಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಚಾಣಾಕ್ಷತನದಿಂದ ನಿವಾರಿಸಬೇಕು ಶಾಲೆಯ ಪ್ರತಿಯೊಬ್ಬ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗದುಕೊಂಡು ಸೂಕ್ತ ನಿರ್ಣಯ ಕೈಗೊಳ್ಳುವ ಸಾಮಥ್ಯ ಆತ ಹೊಂದಿರಬೇಕು.

- **ನಾಯಕತ್ವದ ಗುಣಗಳು (Leadership Qualities)** : ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಮೇಲೆ ಪ್ರಭಾವ ಬೀರಬಲ್ಲ ನಾಯಕನಲ್ಲಿರಬೇಕಾದ ಎಲ್ಲ ಗುಣಗಳನ್ನು ಮುಖ್ಯೋಪಾಧ್ಯಾಯನು ಹೊಂದಿರಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಉತ್ಸಾಹ, ಸ್ಫೂರ್ತಿಯನ್ನು ತುಂಬುವುದರ ಮೂಲಕ ಶಾಲೆಯ ಮೂಲ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವಂತಹ ಪರಿಪೂರ್ಣ ವ್ಯಕ್ತಿತ್ವವನ್ನು ಆತನು ಹೊಂದಿರಬೇಕಾಗುತ್ತದೆ.
- **ಮಾನವ ಸಂಬಂಧಗಳಲ್ಲಿ ಆಸಕ್ತಿ (Interest in Human Relationship)** : ಪರಿಣಾಮಕಾರಿ ಮುಖ್ಯೋಪಾಧ್ಯಾಯನು ಶಿಕ್ಷಣ ಇಲಾಖೆ, ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಆಸಕ್ತಿ ಹೊಂದಿರುತ್ತಾನೆ. ಮಾನವ ಸಂಬಂಧಗಳ ನಿರ್ವಹಣೆಯಲ್ಲಿ ಪ್ರವೀಣನಾಗಿ ಪ್ರತಿಯೊಬ್ಬರ ಸಹಕಾರ, ಗೌರವ ಹೊಗಳಿಕೆ ಹಾಗೂ ನಂಬಿಕೆಗೆ ಅರ್ಹನಾಗಿರುತ್ತಾನೆ. ಶಾಲೆಗೆ ಸಂಬಂಧಿಸಿದ ಪ್ರತಿಯೊಬ್ಬ ವ್ಯಕ್ತಿಗಳ ಭಾವನೆಗಳಿಗೆ ಸ್ಪಂದಿಸಿ ಅವರ ವಿಶ್ವಾಸವನ್ನು ಗಳಿಸುವ ಅರ್ಹತೆಯನ್ನು ಆತನು ಹೊಂದಿರಬೇಕಾಗಿರುವುದು ಅತ್ಯಾವಶ್ಯಕವಾಗಿದೆ.

- **ಪರಿಣಾಮಕಾರಿ ಆಡಳಿತಗಾರ (Effective Administrator)** : ಮುಖ್ಯೋಪಾಧ್ಯಾಯನು ಶಾಲೆಯ ಪ್ರತಿಯೊಂದು ಆಡಳಿತಾತ್ಮಕ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯವನ್ನು ಹೊಂದಿರಬೇಕು. ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ಆಡಳಿತವನ್ನು ನಡೆಸುವ ಪ್ರವೃತ್ತಿಯನ್ನು ಮುಖ್ಯೋಪಾಧ್ಯಾಯನು ಹೊಂದಿರಬೇಕಾಗುತ್ತದೆ.
- **ಸಂಘಟನಾ ಸಾಮರ್ಥ್ಯ (Organising Ability)** : ಶಾಲೆಯು ಒಂದು ಸಾಮಾಜಿಕ ಸಂಸ್ಥೆಯಾಗಿದ್ದು ಅದು ತನ್ನದೆಯಾದ ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಹೊಂದಿರುತ್ತದೆ. ಶಾಲೆಯಲ್ಲಿ ಲಭ್ಯವಿರುವ ಪ್ರತಿಯೊಂದು ಸಂಪನ್ಮೂಲಗಳನ್ನು ಕ್ರಮಬದ್ಧವಾಗಿ ಸಂಘಟಿಸುವ ಸಾಮರ್ಥ್ಯ ಮುಖ್ಯೋಪಾಧ್ಯಾಯನಲ್ಲಿರಬೇಕಾಗುತ್ತದೆ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಸಂಘಟಿಸುವಲ್ಲಿ ವಿಶೇಷ ಆಸಕ್ತಿಯನ್ನು ಅವರು ಹೊಂದಿರಬೇಕು.

- **ವೃತ್ತಿ ತರಬೇತಿ (Professional Training)** : ಮುಖ್ಯೋಪಾಧ್ಯಾಯರು ಉತ್ತಮ ಶೈಕ್ಷಣಿಕ ಅರ್ಹತೆಯ ಜೊತೆಗೆ ಅಗತ್ಯವಾದ ವೃತ್ತಿ ತರಬೇತಿಯನ್ನು ಪಡೆದಿರಬೇಕಾಗುತ್ತದೆ. ಶಾಲೆಯಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹೊಣೆಗಾರಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದರೆ ವೃತ್ತಿ ತರಬೇತಿಯನ್ನು ಪಡೆದುಕೊಳ್ಳುವುದು ಅತ್ಯಾವಶ್ಯಕ. ವೃತ್ತಿ ತರಬೇತಿಯಲ್ಲಿ ಪಡೆದ ಜ್ಞಾನ , ಕೌಶಲ್ಯ ಹಾಗೂ ತಂತ್ರಗಳಿಂದ ತನ್ನ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗುತ್ತದೆ.
- **ಪರಿಣಾಮಕಾರಿ ಶಿಕ್ಷಕ (An Effective Teacher)** : ಪ್ರತಿಯೊಬ್ಬ ಮುಖ್ಯೋಪಾಧ್ಯಾಯನು ಮೊದಲು ಶಿಕ್ಷಕ ನಂತರ ಶಾಲೆಯ ಮುಖ್ಯಸ್ಥ ಎಮಬುದನ್ನು ಮನಃಪೂರ್ವಕವಾಗಿ ಭಾವಿಸಿಕೊಳ್ಳಬೇಕಾಗುತ್ತದೆ. ಒರ್ವ ಪರಿಣಾಮಕಾರಿ ಅಥವಾ ಆದರ್ಶ ಶಿಕ್ಷಕ ಶಾಲೆಯ ಮುಖ್ಯಸ್ಥನಾಗುವ ಎಲ್ಲ ಉತ್ತಮ ಅರ್ಹತೆಗಳನ್ನು ಹೊಂದಿರುತ್ತಾನೆ. ಪ್ರತಿಯೊಬ್ಬರನ್ನು ಅವರವರ ಕಾರ್ಯಗಳಲ್ಲಿ ಮುಂದುವರಿಯುವಂತೆ ಸೂಕ್ತ ಪ್ರೋತ್ಸಾಹ ನೀಡುವುದರ ಮೂಲಕ ಹುರಿದುಂಬಿಸುತ್ತಾನೆ. ವಿದ್ಯಾರ್ಥಿಗಳ ಪ್ರೀತಿ, ಗೌರವಕ್ಕೆ ಪಾತ್ರನಾಗಿ ಸಹೋದ್ಯೋಗಿಗಳೊಂದಿಗೆ ಆತ್ಮೀಯವಾಗಿ ಬೆರೆತು ಅವರ ಮೇಲೆ ಪ್ರಭಾವ ಬೀರುವ ವ್ಯಕ್ತಿತ್ವವನ್ನು ಮುಖ್ಯೋಪಾಧ್ಯಾಯನು ಹೊಂದಿರಬೇಕಾಗುತ್ತದೆ.

- **ಮುಖ್ಯೋಪಾಧ್ಯಾಯನ ಗುಣಗಳು (Qualities Of Headmaster)** : ಸೌರವ್ಯೂಹದಲ್ಲಿ ಸೂರ್ಯನಿರುವಂತೆ ಶಾಲೆಯ ಕೇಂದ್ರ ಬಿಂದು ಮುಖ್ಯೋಪಾಧ್ಯಾಯನಿರುತ್ತಾನೆ. **‘As is the Head so is the school’** ಎನ್ನುವ ಹಾಗೆ ಶಾಲೆಯ ಪ್ರಗತಿ ಮುಖ್ಯೋಪಾಧ್ಯಾಯನ ಗುಣಗಳ ಮೇಲೆ ಅವಲಂಭಿಸಿದೆ. ಶಾಲೆಯಂಬ ಭವ್ಯವಾದ ವಿದ್ಯಾಮಂದಿರದಲ್ಲಿ ಅತ್ಯಂತ ಜವಾಬ್ದಾರಿಯುತವಾದ ಸ್ಥಾನವನ್ನು ಅಲಂಕರಿಸುವ ಮುಖ್ಯೋಪಾಧ್ಯಾಯನು ಕೆಲವು ವಿಶೇಷ ಗುಣಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ. ಅವುಗಳನ್ನು ಈ ಕೆಳಗಿನಂತೆ ನಿರೂಪಿಸಬಹುದಾಗಿದೆ.
- **ಉತ್ತಮ ಶೈಕ್ಷಣಿಕ ಅರ್ಹತೆ (Good Academic Qualification)** : ಶಾಲೆ ಎಂಬ ಸುಂದರ ಸಾಮ್ರಾಜ್ಯದಲ್ಲಿ ಮುಖ್ಯೋಪಾಧ್ಯಾಯನು ರಾಜನಾಗಿರುತ್ತಾನೆ. ಶಾಲಾ ಮುಖ್ಯಸ್ಥನು ಪ್ರತಿಯೊಂದು ಹೊಣೆಗಾರಿಕೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಿಕೊಂಡು ಹೋಗಬೇಕೆಂದರೆ ಆತನು ಉತ್ತಮ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕಾಗುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆ, ಸುಧಾರಣೆ ಹಾಗೂ ಅವಿಷ್ಕಾರಗಳ ಸಂಪೂರ್ಣ ಜ್ಞಾನ ಪಡೆದು ಅದನ್ನು ತನ್ನ ವೃತ್ತಿಯಲ್ಲಿ ಅಳವಡಿಸಿಕೊಳ್ಳಬೇಕ. ಇಲಾಖೆ ನಿಗದಿ ಪಡಿಸಿದ ಶೈಕ್ಷಣಿಕ ಅರ್ಹತೆಯ ಜೊತೆಗೆ ನಾಯಕನಿಗಿರಬೇಕಾದ ಗುಣಗಳು ಹಾಗೂ ಶಾಲೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋಗು ಅಗತ್ಯವಾದ ಅರ್ಹತೆಯನ್ನು ಮುಖ್ಯೋಪಾಧ್ಯಾಯನು ಹೊಂದರಬೇಕಾಗುತ್ತದೆ.

- **ಬಾಲಕೃಷ್ಣ ಜೋಷಿ** : "ಮುಖ್ಯೋಪಾಧ್ಯಾಯನು ತನ್ನ ಸ್ಥಾನದ ಪಾವಿತ್ರ್ಯತೆಯಿಂದ ಸರಕಾರ ಮತ್ತು ಶಾಲೆ, ಆಡಳಿತ ಮಂಡಳಿ ಮತ್ತು ಸಿಬ್ಬಂದಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುವನು."
- **ಡಾ. ಜಸ್ವಂತ್ ಸಿಂಗ್** : "ಮುಖ್ಯೋಪಾಧ್ಯಾಯನು ಶೈಕ್ಷಣಿಕ ಪ್ರಕ್ರಿಯೆಯ ನಾಭಿಯಿದ್ದಂತೆ, ಶಾಲಾ ವ್ಯವಸ್ಥೆಯ ಯಶಸ್ಸು ಆತನ ಸಾಮರ್ಥ್ಯ, ಕೌಶಲ್ಯ ಹಾಗು ರಿಣಾಮಕಾರಿ ನಾಯಕತ್ವದ ಮೇಲೆ ಅವಲಂಬಿಸಿರುತ್ತದೆ."
- **ಡಬ್ಲ್ಯೂ ಎಂ. ರೈಬರ್ನ್** : "ಪ್ರಧಾನ ನಾವಿಕನು ಹಡಗನು ನಡೆಸಲು ಡಷ್ಟು ಪ್ರಮುಖನೋ ಆಲೆಯನ್ನು ನಡೆಸುವಲ್ಲಿ ಮುಖ್ಯೋಪಾಧ್ಯಾಯನು ಅಷ್ಟೇ ಪ್ರಮುಖ ಪಾತ್ರ ನಿರ್ವಹಿಸುತ್ತಾನೆ."
- **ಡಾ. ವಿ.ಎಸ್. ಜಾ** : "ಒರ್ವ ಉತ್ತಮ ಮುಖ್ಯೋಪಾಧ್ಯಾಯನು ಕೇವಲ ವಿದ್ವಾಂಸನಾಗಿರದೆ ಅದಕ್ಕೂ ಮಿಗಿಲಾಗಿ ಒರ್ವ ಸ್ವಚ್ಚಾರಿತ್ರ್ಯವನ್ನು ಹೊಂದಿದ ವ್ಯಕ್ತಿಯಾಗಿರುತ್ತಾನೆ."
- **ಪಿ.ಸಿ. ರೈನ್** : "ಗಡಿಯಾರಕ್ಕೆ ಮುಖ್ಯ ಸ್ಪ್ರಿಂಗ್, ಯಂತ್ರಕ್ಕೆ ಚಲಿಸುವ ಚಕ್ರ, ಹಡಗಿಗೆ ಯಂತ್ರವಿದ್ದಂತೆ ಶಾಲೆಗೆ ಮುಖ್ಯೋಪಾಧ್ಯಾಯನಿರುತ್ತಾನೆ."

- ಮುಖ್ಯೋಪಾಧ್ಯಾಯರು ಶಾಲೆಯಲ್ಲಿರುವ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಬೋಧಕೇತರ ಸಿಬ್ಬಂದಿಯವರ ನಾಯಕನಾಗಿ ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡುವುದರ ಮೂಲಕ ಅವರು ಸಮರ್ಪಕವಾಗಿ ಕಾರ್ಯನಿರ್ವಹಿಸಲಿಕ್ಕೆ ಸೂಕ್ತ ನಿರ್ದೇಶನ ನೀಡುವರು. ಸಮುದ್ರದಲ್ಲಿ ಹಡಗು ಚಲಿಸಲು ದಿಕ್ಸೂಚಿ ಹೇಗೆ ಮುಖ್ಯವೋ ಹಾಗೆಯೇ ಶಾಲೆಯನ್ನು ಪ್ರಗತಿ ಪಥದತ್ತ ಮುನ್ನಡೆಸಲು ಮುಖ್ಯೋಪಾಧ್ಯಾಯನ ಕರ್ತವ್ಯ ಮತ್ತು ಜವಾಬ್ದಾರಿ ಮಹತ್ವದಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಮುಖ್ಯೋಪಾಧ್ಯಾಯನ ಪಾತ್ರವನ್ನು ಅನೇಕ ವಿದ್ವಾಂಸರು ಹಲವಾರು ವಿಶೇಷಣಗಳಿಂದ ಬಣ್ಣಿಸಿರುವುದನ್ನು ನಾವು ಗಮನಿಸಬಹುದು.

- ಮುಖ್ಯೋಪಾಧ್ಯಾಯ (HEADMASTER)
- ಮುಖ್ಯೋಪಾಧ್ಯಾಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಶಾಲೆಯ ಪ್ರಧಾನ ಹಾಗೂ ಕೇಂದ್ರ ಸ್ಥಾನವನ್ನು ಪ್ರತಿನಿಧಿಸುತ್ತಾನೆ. ಆತನ ವ್ಯಕ್ತಿತ್ವ, ಸಾಮರ್ಥ್ಯ, ಕೌಶಲ, ಯೋಗ್ಯತೆ, ತರಬೇತಿ ಮತ್ತು ದಕ್ಷತೆಯ ಮೇಲೆ ಶಾಲೆಯ ಯಶಸ್ಸು ಅವಲಂಭಿಸಿರುತ್ತದೆ. ಮುಖ್ಯೋಪಾಧ್ಯಾಯನ ವ್ಯಕ್ತಿತ್ವ ಶಾಲೆಯ ಸಮಗ್ರ ಕಾರ್ಯವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಶಾಲೆಯ ಮಾನವ ಸಂಪನ್ಮೂಲಗಳ ನಿರ್ವಹಣೆ, ಭೌತಿಕ ಸಂಪನ್ಮೂಲಗಳ ನಿರ್ವಹಣೆ, ಪಠ್ಯ–ಸಹಪಠ್ಯ ಚಟುವಟಿಕೆಗಳ ಸಂಘಟನೆ, ಬೋಧನಾ, ಪರೀಕ್ಷೆಗಳ ನಿರ್ವಹಣೆ ಹೀಗೆ ಪ್ರತಿಯೊಂದು ಅಂಶಗಳು ಮುಖ್ಯೋಪಾಧ್ಯಾಯರ ದಕ್ಷತೆಯನ್ನು ಅವಲಂಬಿಸಿರುತ್ತದೆ. ಶಾಲೆಯಲ್ಲಿ ಉತ್ತಮ ವಾತಾವರಣದ ನಿರ್ಮಾಣ ಹಾಗೂ ಮಾನವೀಯ ಸಂಬಂಧಗಳ ನಿರ್ವಹಣೆಯ ಮೂಲಕಶಾಲೆ ಸರ್ವತೋಮುಖವಾಗಿ ಪ್ರಗತಿಯನ್ನು ಕಾಣಲಿಕ್ಕೆ ಮುಖ್ಯೋಪಾಧ್ಯಾಯರ ಪಾತ್ರ ಮಹತ್ವದ್ದಾಗಿದೆ.

- ಶಿಕ್ಷಣ ಸಂಸ್ಥೆಗಳು ಮೇಲೆ ಕಾಣಿಸಿದ ಪ್ರಮುಖ ಮಾನವ ಸಂಪನ್ಮೂಲಗಳನ್ನು ಹೊಂದಿದ್ದು ಅದರ ಸರ್ವಾಂಗೀಣ ಅಭಿವೃದ್ಧಿಯು ಪ್ರತಿಯೊಬ್ಬರನ್ನು ಅವಲಂಭಿಸಿದೆ. ಶಾಲೆ ಹಾಗೂ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಮಾನವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡಾಗ ಸಂಪನ್ಮೂಲಗಳ ನಿರ್ವಹಣೆಯ ಮೂಲ ಉದ್ದೇಶವನ್ನು ಈಡೇರಿಸಿದಂತಾಗುತ್ತದೆ. ಶಾಲೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸದುದ್ದೇಶದಿಂದ ಮಾನವ ಸಂಪನ್ಮೂಲವನ್ನು ಕ್ರಮಬದ್ಧವಾಗಿ ಪೋಷಿಸುವುದು, ಬೆಳೆಸುವುದು ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸುವುದು ಪ್ರಸ್ತುತ ಸನ್ನಿವೇಶದಲ್ಲಿ ಶ್ರೇಯಸ್ಕರವೆನಿಸುತ್ತದೆ.

- **ಸ್ಥಳೀಯ ತಜ್ಞರು (Local Experts)** : ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನವನವೀನ ಮಾಹಿತಿಯನ್ನು ನೀಡಲಿಕ್ಕೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಖ್ಯಾತರಾದ ಸ್ಥಳೀಯ ತಜ್ಞರನ್ನು ಆಹ್ವಾನಿಸಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಸ್ಥಳೀಯವಾಗಿ ಲಭ್ಯವಿರುವ ವೈದ್ಯರು, ವಕೀಲರು, ಲೇಖಕರು, ವಿಶ್ರಾಂತ ಶಿಕ್ಷಕರು, ಯೋಧರು, ಸ್ವಾತಂತ್ರ್ಯ ಹೋರಾಟಗಾರರು, ಕಲಾಕಾರರು, ಸಂಗೀತಗಾರರು ಮುಂತಾದವರ ಅನುಪಮ ಪ್ರತಿಭೆ ಹಾಗೂ ಅನುಭವಗಳ ಪ್ರಯೋಜನವನ್ನು ವಿದ್ಯಾರ್ಥಿಗಳಿಗೆ ದೊರೆಯುವಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸಿ ಅವರ ಸೇವೆಯನ್ನು ಪಡೆದುಕೊಳ್ಳಬಹುದಾಗಿದೆ. ಸ್ಥಳೀಯ ತಜ್ಞರು ಶಾಲೆಗೆ ಅಗತ್ಯವಾದ ಸೇವೆಯನ್ನು ಒದಗಿಸುವುದರಿಂದ ಅವರನ್ನು ಕೂಡ ಶಾಲೆಯ ಮಾನವ ಸಂಪನ್ಮೂಲಗಳನ್ನಾಗಿ ಶಾಲೆ ಹಾಗೂ ಮಕ್ಕಳ ಪ್ರಗತಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

- **ಶಿಕ್ಷಣ ಅಧಿಕಾರಿಗಳು (Education Officer)**: ಕಾನೂನುಬದ್ಧವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಇಲಾಖೆಯ ಪ್ರಮುಖ ನಿಯಮಾವಳಿಗಳನ್ನು ಶಾಲಾ ಸಿಬ್ಬಂದಿಯವರಿಗೆ ಮಾರ್ಗದರ್ಶಿ ಅಥವಾ ಆದೇಶಗಳ ರೂಪದಲ್ಲಿ ತಿಳಿಸಿಕೊಡಬೇಕಾಗುತ್ತದೆ. ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಿ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನು ಇಲಾಖೆಯ ಅಧಿಕಾರಿಗಳು ಪ್ರತಿಯೊಂದು ಶಾಲೆಗಳಿಗೆ ಸಂದರ್ಭಕ್ಕನುಸಾರವಾಗಿ ನೀಡುತ್ತಾರೆ. ಶಾಲೆಯಲ್ಲಿ ಇಲಾಖೆಯ ಕಾರ್ಯಕ್ರಮಗಳು ಅನುಷ್ಠಾನಕ್ಕೆ ತರುವುದರ ಮೂಲಕ ಶಿಕ್ಷಣದ ಗುಣಮಟ್ಟ ಸುಧಾರಣೆಯಲ್ಲಿ ಶಿಕ್ಷಣ ಅಧಿಕಾರಿಗಳು ಸಹ ತಮ್ಮದೆಯಾದ ಮಹತ್ವದ ಪಾತ್ರವಹಿಸುವುದರಂದ ಅವರನ್ನು ಕೂಡ ಶಾಲೆಯ ಮಾನವ ಸಂಪನ್ಮೂಲಗಳೆಂದು ಪರಿಗಣಿಸಬಹುದಾಗಿದೆ.

- **ಪೋಷಕರು (Parent)** : ಶಾಲೆಯ ಪ್ರಗತಿಯಲ್ಲಿ ಪೋಷಕರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಮ್ಮದೆಯಾದ ಕಾಣಿಕೆಯನ್ನು ನೀಡಬೇಕಾಗುತ್ತದೆ. ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಪ್ರಕ್ರಿಯೆಯಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿರುವ ಶಾಲೆಯ ಅಭಿವೃದ್ಧಿಯಲ್ಲಿ ಪೋಷಕರು ಆಸಕ್ತಿವಹಿಸುತ್ತಾರೆ. ಶಾಲೆಯ ಹಲವಾರು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಉತ್ತಮ ಸಲಹೆ–ಸೂಚನೆಗಳನ್ನು ಹಾಗೂ ಸೇವೆಗಳನ್ನು ನೀಡುವುದರಿಂದ ಪೋಷಕರು ಸಹ ಶಾಲೆಯ ಪ್ರಮುಖ ಮಾನವ ಸಂಪನ್ಮೂಲಗಳೆಂದು ಗುರುತಿಸಲ್ಪಡುತ್ತಾರೆ.

- **ತಾಂತ್ರಿಕ ಸಿಬ್ಬಂದಿ (Technical Staff)** : ವಿಶೇಷ ತರಬೇತಿ ಹಾಗೂ ಶಿಕ್ಷಣ ಪಡೆದ ತಾಂತ್ರಿಕ ಸಿಬ್ಬಂದಿಯವರು ಸಹ ಶಾಲೆಯ ಕಾರ್ಯನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಗ್ರಂಥಪಾಲಕರು, ಪ್ರಯೋಗಾಲಯ ಸಹಾಯಕರು, ಗಣಕಯಂತ್ರ ನಿರ್ವಹಿಸುವವರು, ದೈಹಿಕ ನಿರ್ದೇಶಕರು, ಆರೋಗ್ಯ ಸಹಾಯಕರು ಮುಂತಾದವರು ಶಾಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯನಿರ್ವಹಣೆಯಲ್ಲಿ ಹೊಣೆಗಾರಿಕೆಗಳನ್ನು ಹೊಂದಿರುತ್ತಾರೆ. ಪ್ರತಿಯೊಂದು ಶಾಲೆಗಳಲ್ಲಿ ವಿಶೇಷ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ತಾಂತ್ರಿಕ ಸಿಬ್ಬಂದಿಯವರ ಪಾತ್ರ ಪ್ರಮುಖವಾಗಿರುವುದರಿಂದ ಅವರು ಕೂಡ ಶಾಲೆಯ ಉಪಯುಕ್ತ ಮಾನವ ಸಂಪನ್ಮೂಲವೆಂದು ಗುರುತಿಸಲ್ಪಡುತ್ತಾರೆ.

- **ಬೋಧಕೇತರ ಸಿಬ್ಬಂದಿ (Non-teaching Staff)** : ಶಾಲೆಯಸಮರ್ಪಕ ಕಾರ್ಯನಿರ್ವಹಣೆಯಲ್ಲಿ ಬೋಧಕೇತರ ಸಿಬ್ಬಂದಿಯವರು ಸಹ ಮಹತ್ವದ ಪಾತ್ರವಹಿಸುತ್ತಾರೆ. ಮುಖ್ಯೋಪಾಧ್ಯಾಯರು ಆಡಳಿತಾತ್ಮಕ ಹೊಣೆಗಾರಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗಬೇಕಾದರೆ ಕಛೇರಿ ಸಿಬ್ಬಂದಿಯವರ ಸಹಕಾರ ಅತ್ಯಗತ್ಯ. ಕಾರ್ಯಾಲಯ ಸಿಬ್ಬಂದಿವರ್ಗವು ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹಾಗೂ ಪರಿಚಾರಕರನ್ನು ಒಳಗೊಂಡಿರುತ್ತದೆ. ಕಾರ್ಯಾಲಯದ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವುದರಲ್ಲಿ ಬೋಧಕೇತರ ಸಿಬ್ಬಂದಿಯವರ ಪಾತ್ರ ಪ್ರಮುಖವಾಗಿರುವುದರಿಂದ ಅವರನ್ನು ಸಹ ಶಾಲೆಯ ಮಾನವ ಸಂಪನ್ಮೂಲವೆಂದು ಪರಿಗಣಿಸಲಾಗುತ್ತದೆ.

- **ವಿದ್ಯಾರ್ಥಿಗಳು (Student)** : ಇಂದಿನ ವಿದ್ಯಾರ್ಥಿಗಳೆ ನಾಳಿನ ಭವ್ಯ ಭಾರತದ ಪ್ರಜ್ಞಾವಂತ ಪ್ರಜೆಗಳಾಗುವುದರಿಮದ ಅವರು ಶಾಲೆಯ ಕ್ರಿಯಾತ್ಮಕ ಮಾನವ ಸಂಪನ್ಮೂಲಗಳೆಂದು ಗುರುತಿಸಲ್ಪಡುತ್ತಾರೆ. ವಿದ್ಯಾರ್ಥಿಗಳನ್ನು ಶಾಲಾ–ಕಾಲೇಜುಗಳ ಅಮೂಲ್ಯ ಆಸ್ತಿಯೆಂದು ಪರಿಗಣಿಸಬೇಕಾಗುತ್ತದೆ.. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಸಾಧಿಸಲು ಅವರನ್ನು ಬೋಧನಾ–ಕಲಕಾ ಪ್ರಕ್ರಿಯೆಯಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯ ಪ್ರತಿಯೊಂದು ಯೋಜನೆಗಳು, ಕಾರ್ಯಕ್ರಮಗಳು ವಿದ್ಯಾರ್ಥಿ ಕೇಂದ್ರಿತವಾಗಿರುವುದರಿಂದ ವಿದ್ಯಾರ್ಥಿಗಳು ಶಾಲೆಯ ಮಹತ್ವದ ಮಾನವ ಸಂಪನ್ಮೂಲವಾಗಿರುತ್ತಾರೆ.

- **ಶಿಕ್ಷಕರು (Teacher)** : ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕನ ಪಾತ್ರ ಅಮೋಘವಾದುದಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಕಾರಾತ್ಮಕ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ತನ್ನದೆಯಾದ ಮಹತ್ವದ ಪ್ರಭಾವ ಬೀರುವ ಶಿಕ್ಷಕರು ಅತ್ಯಮೂಲ್ಯ ಮಾನವ ಸಂಪನ್ಮೂಲವೆಂದು ಗುರುತಿಸಲ್ಪಡುತ್ತಾರೆ. ಶಾಲೆ, ಸಮಾಜ ಹಾಗೂ ರಾಷ್ಟ್ರದ ಸರ್ವತೋಮುಖ ವಿಕಾಸದಲ್ಲಿ ಶಿಕ್ಷಕರು ಸಕ್ರಿಯವಾಗಿ ಕಾರ್ಯನಿರ್ವಹಿಸುವುದರಿಂದ ಅವರನ್ನು ಸಾಮಾಜಿಕ ಬದಲಾವಣೆಯ ಹರಿಕಾರರು, ರಾಷ್ಟ್ರ ನಿರ್ಮಾಪಕರು, ರಾಷ್ಟ್ರ ಶಿಲ್ಪಿಗಳು ಮುಂತಾದ ಪದನಾಮಗಳಿಂದ ಕರೆಯಲಾಗುತ್ತದೆ. ಶಾಲಾ ಪರಿಸರದಲ್ಲಿ ಕಲಿಕಾ ವಾತಾವರಣ ಸೃಷಿಸಿ ಜ್ಞಾನ ಪ್ರಸಾರ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರವಹಿಸುವ ಶಿಕ್ಷಕರು ಶಿಕ್ಷಣ ಸಂಸ್ಥೆಗಳ ಅತ್ಯಮೂಲ್ಯವಾದ ಮಾನವ ಸಂಪನ್ಮೂಲವೆಂದು ಪರಿಗಣಿಸಲ್ಪಡುತ್ತಾರೆ.

- **ಮುಖ್ಯೋಪಾಧ್ಯಾಯರು (Headmaster)** : ಶಾಲೆಯೆಂಬ ವಿದ್ಯಾಮಂದಿರದಲ್ಲಿ ಅತ್ಯಂತ ಜವಾಬ್ದಾರಿಯುತ ಸ್ಥಾನವನ್ನು ಅಲಂಕರಿಸಿರುವ ಮುಖ್ಯೋಪಾಧ್ಯಾಯರು ಶಾಲೆಯ ಪ್ರಧಾನ ಮಾನವ ಸಂಪನ್ಮೂಲವೆಂದು ಗುರುತಿಸಲ್ಪಡುತ್ತಾರೆ. ಶಾಲೆಯ ಪ್ರತಿಯೊಂದು ಘಟಕಗಳ ಕಾರ್ಯನಿರ್ವಹಣೆಯು ಮುಖ್ಯೋಪಾಧ್ಯಾಯರ ದಕ್ಷತೆಯನ್ನು ಅವಲಂಬಿಸಿರುತ್ತದೆ. ಶಾಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮುಖ್ಯೋಪಾಧ್ಯಾಯರು ಜ್ಞಾನ, ಕೌಶಲ್ಯ, ಪ್ರತಿಭೆ, ನಾಯಕತ್ವದ ಗುಣ, ಮಾನವೀಯ ಸಂಬಂಧದ ನಿರ್ವಹಣೆ ಹಾಗೂ ಆಡಳಿತದ ಶೈಲಿ ಮಹತ್ವದ ಪಾತ್ರವಹಿಸುತ್ತದೆ.

- **ಶಾಲೆಯ ಮಾನವ ಸಂಪನ್ಮೂಲಗಳು (Human Resources of the School)** :

ಶಾಲೆಯು ಮಾನವ ಸಂಪನ್ಮೂಲ ಕೇಂದ್ರಿತ ಒಂದು ಸಾಮಾಜಿಕ ಸಂಸ್ಥೆಯಾಗಿದೆ. ಶಾಲೆಯ ಪರಿಣಾಮಕಾರಿ ಕಾರ್ಯವ್ಯವಸ್ಥೆ ಸಂಪೂರ್ಣವಾಗಿ ಅದು ಹೊಂದಿರುವ ಮಾನವ ಸಂಪನ್ಮೂಲಗಳನ್ನು ಅವಲಂಬಿಸಿರುತ್ತದೆ. ಒಂದು ಕುಟುಂಬ, ಸಮಾಜ, ಸಮುದಾಯ ಹಾಗೂ ರಾಷ್ಟ್ರಗಳಂತೆ ಶಾಲೆಯು ಸಹ ತನ್ನದೆಯಾದ ಮಾನವ ಸಂಪನ್ಮೂಲಗಳನ್ನು ಹೊಂದಿರುತ್ತದೆ. ಶಾಲೆಯ ಪ್ರಗತಿಯಲ್ಲಿ ಮಹತ್ವದ ಪ್ರಭಾವ ಬೀರುವ ಅದರ ಪ್ರಮುಖ ಮಾನವ ಸಂಪನ್ಮೂಲಗಳನ್ನು ಹೀಗೆ ಗುರುತಿಸಬಹುದಾಗಿದೆ.

1. It develops team spirit.
2. It reduces conflicts and confusions.
3. It is helpful to achieve institutional objectives.
4. It helps to maintain proper hierarchy in the institution.
5. Effective management of human resources improves the efficiency of employees.
6. Delegation of responsibilities and duties can be done and in a proper way.
7. The available resources can be properly utilized.
8. It develops a sense of belongingness towards the institution.
9. It is helpful to improve the quality of education.
10. Suitable persons will be appointed in a suitable position.

- ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕ.
- ಸಂಪನ್ಮೂಲಗಳ ಅಪವ್ಯಯವನ್ನು ನಿವಾರಿಸುತ್ತದೆ.
- ಪ್ರತಿಭೆ ಹಾಗೂ ಸೃಜನಶೀಲತೆಯ ಗುರುತಿಸುವಿಕೆ ಹಾಗೂ ಪ್ರೋತ್ಸಾಹ.
- ಪರಸ್ಪರ ಸಹಕಾರ ಹಾಗೂ ಗೌರವ ಭಾವನೆಯ ಬೆಳವಣಿಗೆ.
- ಗೊಂದಲ ಹಾಗೂ ಸಂಘರ್ಷಗಳ ನಿವಾರಣೆ.
- ಆರೋಗ್ಯಕರ ವಾತಾವರಣದ ನಿರ್ಮಾಣ.
- ಶಾಲೆ ಮತ್ತು ಸಮುದಾಯ ನಡುವೆ ಉತ್ತಮ ಸಂಬಂಧದ ಬೆಳವಣಿಗೆ.

- ಗುಣಾತ್ಮಕ ಶಿಕ್ಷಣ ನೀಡುವಲ್ಲಿ ನೆರವಾಗುತ್ತದೆ.
- ಸಂಸ್ಥೆಯ ಮೂಲ ಉದ್ದೇಶಗಳನ್ನು ಈಡೇರಿಸಬಹುದು.
- ಸಂಪನ್ಮೂಲಗಳ ಸಮರ್ಪಕ ಬಳಕೆ ಸಾಧ್ಯವಾಗುತ್ತದೆ.
- ಸಂಸ್ಥೆಯಲ್ಲಿ ಕ್ರಮಬದ್ಧ ಶ್ರೇಣಿಯನ್ನು ಕಾಪಾಡಿಕೊಂಡು ಬರಲು ಸಹಾಯಕ.
- ಹೊಣೆಗಾರಿಕೆ ಹಾಗೂ ಕಾರ್ಯಗಳನ್ನು ಸಮರ್ಪಕವಾಗಿ ಹಂಚಲು ಸಹಾಯಕ.
- ಸೂಕ್ತ ಹುದ್ದೆಗೆ ಸೂಕ್ತ ವ್ಯಕ್ತಿಯ ಆಯ್ಕೆಗೆ ಸಹಾಯಕ.
- ಸಂಸ್ಥೆಯಲ್ಲಿ ಆಂತರಿಕ ಮಾನವೀಯ ಸಂಬಂಧ ಬೆಳೆಯುತ್ತದೆ.
- ಮಾನವ ಸಂಪನ್ಮೂಲದ ದಕ್ಷತೆ ವೃದ್ಧಿಯಾಗುತ್ತದೆ.
- ತಂಡಸ್ಫೂರ್ತಿ ಬೆಳೆಯುತ್ತದೆ.

- The importance of management of human resources can be mentioned as below ;

ಶಿಕ್ಷಣ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಗಳ ನಿರ್ವಹಣೆ ವಿಶೇಷ ಮಹತ್ವವನ್ನು ಪಡೆದಿದೆ. ಶಿಕ್ಷಣ ಸಂಸ್ಥೆಗಳು ಮಾನವ ಕೇಂದ್ರಿತ ಉದ್ಯಮವಾಗಿದ್ದು, ಅದು ಮುಖ್ಯೋಪಾಧ್ಯಾಯರು, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮುಂತಾದವರನ್ನು ಒಳಗೊಂಡಿದೆ. ಶಾಲೆಯ ಮೂಲ ಉದ್ದೇಶಗಳನ್ನು ಈಡೇರಿಸಬೇಕಾದರೆ, ಸೂಕ್ತ ಸಿಬ್ಬಂದಿಯವರನ್ನು ಆಯ್ಕೆ ಮಾಡಿ, ಸೂಕ್ತ ತರಬೇತಿ ನೀಡಿ ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ದೊರೆಯುವಂತೆ ಅವಕಾಶ ಕಲ್ಪಿಸಿಕೊಡುವ ದಿಶೆಯಿಂದ ಮಾನವ ಸಂಪನ್ಮೂಲಗಳ ನಿರ್ವಹಣೆ ಮಹತ್ವದ ಪಾತ್ರವಹಿಸುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ **ಮಾನವ ಸಂಪನ್ಮೂಲಗಳ ಮಹತ್ವವನ್ನು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.**

- " The process of management of human resource ensures that right things happen at the right time in the right way by the right people."

**Importance of Management of Human Resources :**

Proper management of human resources is essential in order to make the school to work in a systematic way. It is through effective management of human resources, that the prestige of an institution and its reputation can be enhanced.

- **Meaning :**

  * "Managing human resources means directing the human energies towards certain desirable  consequences."

  " Management of human resources is the traditional management function of attraction and selection of the best people and putting them on right jobs  where their talents and skills can be best utilized."

  " It is the process by which humane resource are obtained and used effectively and efficiently in the accomplishment of the organization's objectives."

- **ಅರ್ಥ :**
- "ಅಪೇಕ್ಷಿತ ಪ್ರತಿಫಲವನ್ನು ಪಡೆಯಲು ಮಾನವ ಸಾಮರ್ಥ್ಯವನ್ನು ಪ್ರಗತಿಪರ ಪಥದಲ್ಲಿ ನಿರ್ದೇಶಿಸುವುದಕ್ಕೆ ಮಾನವ ಸಂಪನ್ಮೂಲಗಳ ನಿರ್ವಹಣೆ ಎನ್ನುವರು."
- "ಮಾನವ ಸಂಪನ್ಮೂಲಗಳ ನಿರ್ವಹಣೆಯು ಸೂಕ್ತ ಹುದ್ದೆಗಾಗಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವುದರೊಂದಿಗೆ ಅವರ ಪ್ರತಿಭೆ ಹಾಗೂ ಕೌಶಲ್ಯಗಳನ್ನು ಉತ್ತಮವಾಗಿ ಉಪಯೋಗಿಸುವ ಸಾಂಪ್ರದಾಯಿಕ ಕಾರ್ಯವಾಗಿದೆ."
- "ಸೂಕ್ತವಾದ ಕಾರ್ಯವನ್ನು, ಸೂಕ್ತವಾದ ವ್ಯಕ್ತಿಯಿಂದ, ಸೂಕ್ತವಾದ ಸಮಯದಲ್ಲಿ ಹಾಗೂ ಸೂಕ್ತವಾದ ಮಾರ್ಗದಲ್ಲಿ ಪರಿಣಾಮಕಾರಿಯಾಗಿ ಪೂರ್ಣಗೊಳಿಸುವ ಪ್ರಕ್ರಿಯೆಗೆ ಮಾನವ ಸಂಪನ್ಮೂಲಗಳ ನಿರ್ವಹಣೆ ಎಂದು ಕರೆಯುತ್ತಾರೆ."
- "ಸಂಘಟನೆಯ ಉದ್ದೇಶಗಳನ್ನು ಈಡೇರಿಸಲು ದಕ್ಷವಾದ ಮಾನವ ಸಂಪನ್ಮೂಲಗಳನ್ನು ಪಡೆದು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವ ಪ್ರಕ್ರಿಯೆಯೇ ಮಾನವ ಸಂಪನ್ಮೂಲಗಳ ನಿರ್ವಹಣೆ."

This school needs an efficient and dedicated head master, teachers and all supporting staff to carry out various activities of the school.

It needs a well informed parents and community to support its work it requires disciplined pupils to benefit from various programmes of the school.

The management of human resources signifies a systematic approach towards managing the begins of the school. A proper management of human resources is essential to make the system to work effectively. There are a number of factors that contribute towards the success of an institution. It is the people who use all other resource, hence human resources play very important role in the education system.

A school will be of high quality when the human resources in it, are also of a high quality.

Although the structure of the school is raised by brick and mortar, the life to the school is given by the human resources.

The human element in the form of head master, teachers, librarian, office staff, pupils, parents and members of the community are very important and without which school is incomplete.

# Thank You